

# ಸಾಂಚಿ ಸ್ತೂಪ



ಸ್ತೂಪದ ಮುಂದಿನ ಕಮಾನು

**ಸಾಂಚಿಯ ತಿರುಗಾಟ, ಆ ಕಾಲದ ಐತಿಹಾಸಿಕ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಬಿಂಬಿಸಿತು.**

ಚಿತ್ರ– ಲೇಖನ: **ಎನ್.ಎಸ್. ಶಾರದಾ**

**ಭೋ**ಪಾಲ್‌ನಿಂದ ಸಾಂಚಿ 50 ಕಿ.ಮೀ. ದೂರವಿದೆ. 'ಬೆಟ್ವ' ಎನ್ನುವ ನದಿಯ ದಂಡೆ ಮೇಲಿನ ಊರಿದು. ಕ್ರಿ.ಪೂ. 3ನೇ ಶತಮಾನದಲ್ಲಿ ನಿರ್ಮಿಸಿದ ಸಾಂಚಿಯ ಸ್ತೂಪ ವಿಶ್ವವಿಖ್ಯಾತ. ಇದರ ನಿರ್ಮಾಣದ ಹಿನ್ನೆಲೆ ಕುತೂಹಲಕರ.

ಬುದ್ಧನು ವೈಶಾಖ ಪೂರ್ಣಿಮೆಯಂದು ಅವಸಾನವಾದ ನಂತರ ಅನೇಕ ರಾಜರು ಬುದ್ಧನ ಅಸ್ಥಿಗಳನ್ನು ಪಡೆಯಲು ಹಂಬಲಿಸಿದರು. ಕಿತ್ತಾಟ ನಡೆಯಬಹುದೆಂದು ತಿಳಿದ ದ್ರೋಣ ಎಂಬ ಮುನಿಯು ಬುದ್ಧನ ಮೂಳೆಗಳನ್ನು 8 ಭಾಗಗಳಾಗಿ ವಿಂಗಡಿಸಿ ಈ ರಾಜರಿಗೆ ಕೊಟ್ಟನು. ರಾಜರೆಲ್ಲ ಈ ಮೂಳೆಗಳನ್ನು ನೆಲದ ಒಳಗೆ ಹುಗಿದು ಅದರ ಮೇಲೆ ಅರ್ಧ ಗೋಲಾಕಾರದ ಗುಮ್ಮಟ ಅಥವಾ ಸ್ತೂಪಗಳನ್ನು ಕಟ್ಟಿದರು. ಈ ಸ್ತೂಪಗಳಿಗೆ ಬಾಗಿಲಾಗಲೀ, ಕಿಟಕಿಗಳಾಗಲೀ ಇಲ್ಲ. ಅಶೋಕ ಚಕ್ರವರ್ತಿಯು ಈ 8 ಸ್ತೂಪಗಳಲ್ಲಿ 7 ಸ್ತೂಪಗಳಿಂದ ಅಸ್ಥಿಯನ್ನು ತೆಗೆದು ಒಟ್ಟು 8400 ಸ್ತೂಪಗಳನ್ನು ತನ್ನ ರಾಜ್ಯದಾದ್ಯಂತ ಕಟ್ಟಿಸಿದನು. ಸಾಂಚಿಯಲ್ಲಿರುವ ಈ ಸ್ತೂಪ ಇವುಗಳಲ್ಲಿ ಒಂದು.

ಅಶೋಕ ಚಕ್ರವರ್ತಿ ಕಟ್ಟಿಸಿದ ಸ್ತೂಪಗಳಲ್ಲಿ ಇಂದಿಗೂ ಉಳಿದಿರುವ ಏಕೈಕ ಸ್ತೂಪವಿದು. ಈ ಸಾಂಚಿ ಸ್ತೂಪವನ್ನು ಮೂರು ಹಂತಗಳಲ್ಲಿ ನಿರ್ಮಿಸಲಾಗಿದೆ. ಮೌರ್ಯರ ಚಕ್ರವರ್ತಿಯಾದ ಅಶೋಕ ಮತ್ತು ಅವನ ಪತ್ನಿ ದೇವಿ, ಇಟ್ಟಿಗೆಗಳಿಂದ ಮೂಲ ಸ್ತೂಪವನ್ನು 3ನೇ ಶತಮಾನದಲ್ಲಿ ನಿರ್ಮಿಸಿದ್ದರು. ನಂತರ ಸುಂಗ ವಂಶಸ್ಥರು ಇದನ್ನು ದೊಡ್ಡದನ್ನಾಗಿ ಮಾಡಿದರು. ಸಾತವಾಹನರು ಇಲ್ಲಿ ಮೆಟ್ಟಿಲುಗಳು ಮತ್ತು 4 ದ್ವಾರಗಳನ್ನು ನಿರ್ಮಿಸಿದರು. ಈ ಸ್ತೂಪದ ನಾಲ್ಕೂ ದಿಕ್ಕಿನಲ್ಲಿ ದ್ವಾರ ಕಂಬಗಳಿವೆ. ಇವನ್ನು 'ತೋರಣ'